ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 3, July-August 2022, Pp. 43-49
Bi-Monthly, Peer-Reviewed, Open Access, Indexed Journal

ISSN: 2583-3510
SIRDF JOURNALS
editor@srujani.in
www.srujani.in

# ರಾಜಕೀಯದಲ್ಲಿ ಮಹಿಳಾ ಸಹಭಾಗಿತ್ವ (ರಾಯಚೂರು ಜಿಲ್ಲೆಯ ಸ್ಥಳೀಯ ಸರಕಾರವನ್ನು ಅನುಲಕ್ಷಿಸಿ)

**ವೀರೇಶ ಮಲ್ಲಯ್ಯ***
*ಸಂಶೋಧನಾ ವಿದ್ಯಾರ್ಥಿ, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

***Abstract:***
*ಯಾವುದೇ ಒಂದು ಸಮುದಾಯದ ಅಭಿವೃದ್ಧಿಯಲ್ಲಿ ಶಿಕ್ಷಣ ಮತ್ತು ರಾಜಕೀಯ ಸಹಭಾಗಿತ್ವ ಪ್ರಮುಖ ಪಾತ್ರವಹಿಸುತ್ತದೆ. ಆದರೆ ಹಿಂದುಳಿದ, ದಲಿತ, ಮಹಿಳೆಯರನ್ನೊಳಗೊಂಡಂತೆ ಅನೇಕ ಸಮುದಾಯದಲ್ಲಿ ಯಾವುದೇ ಕ್ಷೇತ್ರದಲ್ಲಿ ಪ್ರಾತಿನಿಧ್ಯತೆ ಇಲ್ಲದಿರುವುದನ್ನು ಕಾಣಬಹುದಾಗಿದೆ. ರಾಜಕೀಯ ಸಹಭಾಗಿತ್ವವು ರಾಜಕೀಯದ ಎಲ್ಲಾ ಪ್ರಕ್ರಿಯೆಗಳಲ್ಲಿ ಸಮಾನವಾಗಿ ಭಾಗಿಯಾಗುವುದು, ರಾಜಕೀಯಕ್ಕೆ ಸಂಬಂಧಿಸಿದಂತೆ ನಿರ್ಣಯ ತೆಗೆದುಕೊಳ್ಳುವುದು, ಲಿಂಗ ಭೇದಗಳಿಲ್ಲದೆ ರಾಜಕೀಯದಲ್ಲಿ ಸಮಾನ ಸ್ಥಾನಮಾನ ಮತ್ತು ಅಸ್ತಿತ್ವ ಹೊಂದುವುದು, ರಾಜಕೀಯ ಸಮಾನ ಹಕ್ಕುಗಳನ್ನು ಹೊಂದುವುದು ಹಾಗೂ ಈ ಎಲ್ಲಾ ಪ್ರಕ್ರಿಯೆಯಲ್ಲಿ ಮಹಿಳೆ ಸಮಾನಭಾಗಿತ್ವ ಹೊಂದಿದರೆ ಮಾತ್ರ ಮಹಿಳಾ ರಾಜಕೀಯ ಸಹಭಾಗಿತ್ವ ಅನಿಸಿಕೊಳ್ಳುತ್ತದೆ. ಪ್ರಸ್ತುತ ಲೇಖನದಲ್ಲಿ ರಾಯಚೂರು ಜಿಲ್ಲೆಯ ಸ್ಥಳೀಯ ಸರಕಾರ/ರಾಜಕೀಯದ ಮಹಿಳಾ ಸಹಭಾಗಿತ್ವವನ್ನು ವಿಶ್ಲೇಷಣೆ ಮಾಡಲಾಗಿದೆ.*

**Keywords:** *ರಾಜಕೀಯ, ಸ್ಥಳೀಯ ಸರ್ಕಾರ, ಮಹಿಳಾ ಸಹಭಾಗಿತ್ವ, ಅಭಿವೃದ್ಧಿ, ಪಂಚಾಯಿತಿ.*

## ಪೀಠಿಕೆ

ಯಾವುದೇ ರಾಜಕೀಯ ಪಕ್ಷದ ಆಡಳಿತಾರೂಢ ಸರ್ಕಾರವು ಸ್ಥಳೀಯ ಸಂಸ್ಥೆಗಳಿಗೆ, ಚುನಾಯಿತ ಸದಸ್ಯರಿಗೆ ಪರಮಾಧಿಕಾರಗಳನ್ನು ನೀಡಲು ಮುಂದಾಗುವುದಿಲ್ಲ. ಇದು ವಿಕೇಂದ್ರೀಕರಣದ ವಿಷಯದಲ್ಲೂ ಸ್ಪಷ್ಟವಾಗುತ್ತದೆ. ಶೇ.33.33ರಷ್ಟು ಮೀಸಲಾತಿಯನ್ನು ಶಾಸನಾತ್ಮಕವಾಗಿ ನೀಡದೆ, ತಾತ್ವಿಕವಾಗಿ ಅಧಿಕಾರ ಮತ್ತು ಜವಾಬ್ದಾರಿಗಳನ್ನು ಪ್ರಭುತ್ವವು ಸ್ಥಳೀಯ ಸಂಸ್ಥೆಗಳಿಗೆ ನೀಡಿದೆ. ಆದರೆ ಅವು ಗುಣಾತ್ಮಕವಾಗಿ ಅನುಷ್ಠಾನಗೊಳ್ಳಲು ಬೇಕಾದ ಸಂಪನ್ಮೂಲಗಳನ್ನು ವಾತಾವರಣವನ್ನು ಸಜ್ಜುಗೊಳಿಸಿರುವುದಿಲ್ಲ. ಸ್ವಾಯುತ್ತತೆ, ಸ್ವಾತಂತ್ರ್ಯ ಇರುವುದಿಲ್ಲ. ಹೀಗಾಗಿ ಅಧಿಕಾರಶಾಹಿ ವ್ಯವಸ್ಥೆ ಇದರಿಂದ ಬಲಿತು, ಜನ ಪ್ರತಿನಿಧಿಗಳನ್ನು ಕೀಳಾಗಿ ಕಾಣುವ ಮತ್ತು ತಮ್ಮ ಆಟದ ಬೊಂಬೆಗಳನ್ನಾಗಿಸಿಕೊಂಡಿರುವ ಸಂದರ್ಭಗಳೇ ಹೆಚ್ಚು. ತಮಗೆ ಸಿಕ್ಕ ಅಧಿಕಾರದ ರುಚಿಯನ್ನು ಜನ ಪ್ರತಿನಿಧಿಗಳೊಂದಿಗೆ ಹಂಚಿಕೊಳ್ಳಲು ಇವರು ಸಿದ್ಧರಿಲ್ಲ.

## ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನವು ಪಟ್ಟಣ ಪಂಚಾಯಿತಿ ಹಾಗೂ ಪುರಸಭಾ ಚುನಾವಣೆಗಳಲ್ಲಿ ಸ್ಪರ್ಧಿಸಿದ ಮಹಿಳಾ ಸದಸ್ಯರ ರಾಜಕೀಯ ಸಹಬಾಗಿತ್ವವನ್ನು ಅಧ್ಯಯನ ಮಾಡುವು ಉದ್ದೇಶವನ್ನು ಹೊಂದಿದೆ.

***Please cite this article as:*** ವೀರೇಶ ಮಲ್ಲಯ್ಯ. (2022). ರಾಜಕೀಯದಲ್ಲಿ ಮಹಿಳಾ ಸಹಭಾಗಿತ್ವ (ರಾಯಚೂರು ಜಿಲ್ಲೆಯ ಸ್ಥಳೀಯ ಸರಕಾರವನ್ನು ಅನುಲಕ್ಷಿಸಿ). *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(3), 43–49.

**ಅಧ್ಯಯನದ ವ್ಯಾಪ್ತಿ**

ಈ ಅಧ್ಯಯನವು ರಾಯಚೂರು ಜಿಲ್ಲೆಯ ಪಟ್ಟಣ ಪಂಚಾಯಿತಿ ಹಾಗೂ ಪುರಸಭೆಗಳಿಗೆ ಮಾತ್ರ ಸೀಮಿತವಾಗಿರುತ್ತದೆ.

**ಅಧ್ಯಯನ ವಿಧಾನ ಮತ್ತು ವೈಧಾನಿಕತೆ**

ರಾಯಚೂರು ಜಿಲ್ಲೆಯ ಮಹಿಳೆಯರ ರಾಜಕೀಯ ಭಾಗವಹಿಸುವಿಕೆ ಯಾವ ಮಟ್ಟದಲ್ಲಿದೆ ಎನ್ನುವುದರ ಕುರಿತಂತೆ ಅನುಷಂಗಿಕ ಆಕರಗಳನ್ನು ಸಂಗ್ರಹಿಸಿಕೊಂಡು, ಜೊತೆಗೆ ಕ್ಷೇತ್ರಕಾರ್ಯವನ್ನು ಕೈಗೊಂಡು ಸಂದರ್ಶನ ಮತ್ತು ಪ್ರಶ್ನಾವಳಿಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಿಕೊಂಡು ಅಧ್ಯಯನಕ್ಕೆ ಪೂರಕವಾಗುವಂತೆ ಸ್ತ್ರೀವಾದಿ ನೆಲೆಯಲ್ಲಿ ವಿಶ್ಲೇಷಣೆಯನ್ನು ಮಾಡಲಾಗಿದೆ. ಇದಕ್ಕೆ ಸಂಬಂಧಪಟ್ಟಂತ ಅಂಶಗಳನ್ನು ಪ್ರಸ್ತುತ ಅಧ್ಯಯನದಲ್ಲಿ ದಾಖಲಿಸಿ, ವಿಶ್ಲೇಷಿಸಿಕೊಳ್ಳಲಾಗಿದೆ.

**ಕೋಷ್ಟಕ 1: ಡಿಸೆಂಬರ್ 2021 ತಿಂಗಳಲ್ಲಿ ನಡೆದ ಚುನಾವಣೆಯಲ್ಲಿ ಸ್ಪರ್ಧಿಸಿದವರ ವಿವರ**

| ಕ್ಷೇತ್ರಗಳು | ಒಟ್ಟು ವಾರ್ಡಗಳು | ಸ್ಥಾನಗಳು | | ಒಟ್ಟು ಸ್ವೀಕೃತ ಅರ್ಜಿಗಳು | | ಸ್ಪರ್ಧಿಸಿದ ಪಕ್ಷಗಳು |
|---|---|---|---|---|---|---|
| | | ಪುರುಷ | ಮಹಿಳೆ | ಪುರುಷ | ಮಹಿಳೆ | |
| ಮಸ್ಕಿ (ಪುರಸಭೆ) | 23 | 12 | 11 | 61 | 46 | ಕಾಂಗ್ರೆಸ್, ಬಿಜೆಪಿ ಜೆಡಿಎಸ್, ಪಕ್ಷೇತರ |
| ಕವಿತಾಳ (ಪಟ್ಟಣ ಪಂಚಾಯತ್) | 16 | 9 | 7 | 43 | 27 | ಕಾಂಗ್ರೆಸ್, ಬಿಜೆಪಿ ಜೆಡಿಎಸ್, ಪಕ್ಷೇತರ |
| ತುರ್ವಿಹಾಳ (ಪಟ್ಟಣ ಪಂಚಾಯತ್) | 14 | 8 | 6 | 27 | 18 | ಕಾಂಗ್ರೆಸ್, ಬಿಜೆಪಿ ಜೆಡಿಎಸ್, ಪಕ್ಷೇತರ |
| ಬಳಗನೂರು (ಪಟ್ಟಣ ಪಂಚಾಯತ್) | 12 | 7 | 5 | 26 | 17 | ಕಾಂಗ್ರೆಸ್, ಬಿಜೆಪಿ ಜೆಡಿಎಸ್, ಪಕ್ಷೇತರ |
| ಸಿರಿವಾರ (ಪಟ್ಟಣ ಪಂಚಾಯತ್) | 20 | 11 | 9 | 48 | 38 | ಕಾಂಗ್ರೆಸ್, ಬಿಜೆಪಿ ಜೆಡಿಎಸ್, ಪಕ್ಷೇತರ |

ಕೋಷ್ಟಕ 1 ರಲ್ಲಿ ಪಕ್ಷವಾರು ವಿವಿಧ ರಾಜಕೀಯ ಪಕ್ಷಗಳಡಿ ಸ್ಪರ್ಧಿಸಿದವರ ವಿವರವನ್ನು ನೀಡಲಾಗಿದೆ. ರಾಯಚೂರು ಜಿಲ್ಲೆಯ ಒಂದು ಪುರಸಭೆ ಮತ್ತು ನಾಲ್ಕು ಪಟ್ಟಣ ಪಂಚಾಯತ್ ನಡೆದ ಚುನಾವಣೆಯಲ್ಲಿ ಮಹಿಳೆಯರ ಭಾಗವಹಿಸಿಕೆ ಪ್ರಮಾಣ ಕಡಿಮೆಯಿದೆ. ಹಾಗೂ ರಾಜಕೀಯ ಕುಟುಂಬಗಳ ಹಿನ್ನಲೆಯುಳ್ಳ ಮಹಿಳೆಯರು ಸ್ಪರ್ಧಿಸಿರುವುದು ಕಂಡು ಬಂದಿದೆ.

ರಾಜಕೀಯದಲ್ಲಿ ಮಹಿಳಾ ಸಹಭಾಗಿತ್ವವನ್ನು ನೋಡಿದಾಗ ಕಳೆದ ವರ್ಷ 2021ರ ಡಿಸೆಂಬರ್ ತಿಂಗಳಲ್ಲಿ ನಡೆದ ರಾಜ್ಯದ 58 ಸ್ಥಳೀಯ ಸರಕಾರಗಳ ಚುನಾವಣೆಯ ಸಂದರ್ಭದಲ್ಲಿ ನಡೆದ ರಾಯಚೂರು ಜಿಲ್ಲೆಯ ಮಸ್ಕಿ ಪುರಸಭೆ, ಮಸ್ಕಿ ತಾಲೂಕಿನ ತುರುವಿಹಾಳ ಪಟ್ಟಣ ಪಂಚಾಯಿತಿ, ಸಿರಿವಾರ ತಾಲೂಕಿನ ಸಿರಿವಾರ ಪಟ್ಟಣ ಪಂಚಾಯತ್ ಮತ್ತು ಕವಿತಾಳ ಪಟ್ಟಣ ಪಂಚಾಯಿತಿ, ಸಿಂಧನೂರು ತಾಲೂಕಿನ ಬಳಗನೂರು ಪಟ್ಟಣ ಪಂಚಾಯಿತಿಗಳಲ್ಲಿ ಕ್ಷೇತ್ರಕಾರ್ಯ ಕಂಡಂತೆ ಮಹಿಳಾ ಸಹಭಾಗಿತ್ವ, ಮಹಿಳೆಗೆ ಸಾಧ್ಯವಾಗದೆ ಪುರುಷ ರಾಜಕಾರಣದ ಭಾಗವಾಗಿ ರಾಜಕೀಯದಲ್ಲಿ ಮಹಿಳೆಯರು ಭಾಗವಹಿಸುತ್ತಿರುವುದು ಕಂಡು ಬರುತ್ತದೆ. ಯಾಕೆಂದರೆ ರಾಜಕಿಯದಲ್ಲಿ ಮಹಿಳಾ

ಸಹಭಾಗಿತ್ವ ಮುಖ್ಯವಾಗಿ ಅರ್ಥಗರ್ಭಿತಗೊಳ್ಳುವುದು, ರಾಜಕೀಯ ಎಲ್ಲಾ ಪ್ರಕ್ರಿಯೇಗಳಲ್ಲಿ ಸಮಾನವಾಗಿ ಭಾಗಿಯಾಗುವುದು, ಅದು ರಾಜಕೀಯಕ್ಕೆ ಸಂಬಂದಿಸಿದಂತೆ ನಿರ್ಣಯ ತೆಗೆದುಕೊಳ್ಳುವುದು, ಲಿಂಗ ಭೇದಗಳಿಲ್ಲದೆ ರಾಜಕೀಯದಲ್ಲಿ ಸಮಾನ ಸ್ಥಾನಮಾನ ಹೊಂದುವುದು, ಸಮಾನ ಅಸ್ತಿತ್ವ ಹೊಂದುವುದು, ರಾಜಕೀಯ ಸಮಾನ ಹಕ್ಕುಗಳನ್ನು ಹೊಂದುವುದು ಈ ಎಲ್ಲಾ ಪ್ರಕ್ರಿಯೆಯಲ್ಲಿ ಮಹಿಳೆ ಸಮಾನ ಭಾಗಿತ್ವ ಹೊಂದಿದರೆ ಮಾತ್ರ ಮಹಿಳೆ ರಾಜಕೀಯ ಸಹಭಾಗಿತ್ವ ಅನಿಸಿಕೊಳ್ಳುತ್ತದೆ. ಆದರೆ ಕ್ಷೇತ್ರಕಾರ್ಯದಲ್ಲಿ ನಡೆಸಿದ ಪುರುಸಭೆಗೆ ಮತ್ತು ಪಟ್ಟಣ ಪಂಚಾಯಿತಿಗೆ ಸ್ಪರ್ಧಿಸಿದ ವಿವಿಧ ಪಕ್ಷಗಳ ಮಹಿಳಾ ಅಭ್ಯಾರ್ಥಿಗಳಿಗೆ ನಡೆಸಿದ ಸಂದರ್ಶನದಲ್ಲಿ ದೊರೆತ ಉತ್ತರಗಳನ್ನಾಧರಿಸಿ ವಿಶ್ಲೇಷಿಸಿದರೆ ರಾಜಕೀಯದಲ್ಲಿ ಮಹಿಳಾ ಸಹಭಾಗಿತ್ವ ಪರಿಪೂರ್ಣಗೊಂಡಿಲ್ಲದಿರುವುದು ಕಂಡು ಬರುತ್ತದೆ. ಸಂದರ್ಶನದ ಸಂದರ್ಭದಲ್ಲಿ ರಾಜಕೀಯಕ್ಕೆ ಮತ್ತು ಚುನಾವಣೆಗೆ ಸ್ಪರ್ಧಿಸಿರುವ ಬಹುತೇಕ ಮಹಿಳೆಯರು ರಾಜಕೀಯ ಇಚ್ಚೆ ಇಲ್ಲದಿದ್ದರು ಮತ್ತು ಪುರುಷ ರಾಜಕಾರಣದ ಭಾಗವಾಗಿ ರಾಜಕೀಯದಲ್ಲಿ ಮಹಿಳೆ ಭಾಗವಹಿಸಿರುವುದು ಕಂಡು ಬರುತ್ತದೆ. 30 ಜನ ಮಹಿಳಾ ಅಭ್ಯಾರ್ಥಿಗಳ ಸಂದರ್ಶನದ ಸಂದರ್ಭದಲ್ಲಿ ರಾಜಕೀಯದಲ್ಲಿ ಮಹಿಳಾ ಸಹಭಾಗಿತ್ವಕ್ಕೆ ಸಂಬಂಧಿಸಿದ ಕೇಳಲಾದ ಪ್ರಶ್ನೆಗಳಿಗೆ ಉತ್ತರಿಸಿದ ವಿವರ ಈ ರೀತಿಯಾಗಿದೆ.

ಕೋಷ್ಟಕ 2ರಲ್ಲಿ ಕಳೆದ 2021ರ ಸ್ಥಳೀಯ ಚುನಾವಣೆಯಲ್ಲಿ ಸ್ಪರ್ಧಿಸಿದವರ ವಿವರವನ್ನು ನೀಡಲಾಗಿದೆ. ಅಧ್ಯಯನಕ್ಕೊಳಪಡಿಸಿದ ಒಟ್ಟು ಮಹಿಳೆಯರಲ್ಲಿ ಶೇ.13.3.ರಷ್ಟು ಮಹಿಳೆಯರು ಮಾತ್ರ ರಾಜಕೀಯ ಪಕ್ಷದ ಸದಸ್ಯತ್ವವನ್ನು ಹೊಂದಿದ್ದು, ಶೇ.66.6 ರಷ್ಟು ಮಹಿಳೆಯರು ತಮ್ಮ ಕುಟುಂಬದ ಪುರುಷರು ರಾಜಕೀಯ ಪ್ರಚಾರದಲ್ಲಿ ತೊಡಗಿಸಿಕೊಂಡಿರುವುದಾಗಿ ಅಭಿಪ್ರಾಯ ಪಟ್ಟಿದ್ದಾರೆ. ಈ ಹಿಂದೆ ರಾಜಕೀಯ ಪಕ್ಷಗಳ ಪರವಾಗಿ ಚುನಾವಣೆ ಪ್ರಚಾರದಲ್ಲಿ ಭಾಗವಹಿಸಲಾಗಿದೆಯೆ? ಎನ್ನುವ ಪ್ರಶ್ನೆಗೆ 20 ಜನ ಮಹಿಳೆಯರು ಇಲ್ಲಾ ಎಂದು ಉತ್ತಿರಿಸಿದ್ದಾರೆ. ಇನ್ನು ರಾಜಕೀಯ ಪಕ್ಷಗಳ ಸಭೆಗಳಿಗೆ ನೀವು ಹಾಜರಾಗಿದಿರಾ? ಎನ್ನುವ ಪ್ರಶ್ನೆಗೆ 21 ಜನ ಮಹಿಳೆಯರು ಇಲ್ಲ ಎಂದು ಉತ್ತಿರಿಸಿದ್ದಾರೆ. ಮುಂದುವರೆದು ಇವರಲ್ಲಿ ನಮ್ಮ ಮನೆಯ ಸದಸ್ಯರು(ಪುರುಷರು) ಹಾಜರಾಗಿ ಅವರೇ ಆ ಕೆಲಸವನ್ನು ನಿರ್ವಹಿಸಿದ್ದಾರೆ ಎಂದು ಉತ್ತಿರಿಸಿದ್ದಾರೆ. ರಾಜಕೀಯ ಪಕ್ಷಗಳ ಮುಂಖಂಡರೊಂದಿಗೆ ಪಕ್ಷದ ಕೆಲಸ ಕಾರ್ಯಗಳ ಕುರಿತಂತೆ ನಿರಂತರ ಸಂಪರ್ಕದಲ್ಲಿ ಇದ್ದಿರಾ? 25 ಜನ ಮಹಿಳೆಯರು ಇಲ್ಲ ಎಂದು ಉತ್ತಿರಿಸಿದ್ದಾರೆ. ಇಲ್ಲಿಯು ಕೂಡ ಮನೆಯ ಪುರುಷರು ರಾಜಕೀಯದಲ್ಲಿದ್ದು, ಅವರೇ ನಮಗೆ ರಾಜಕೀಯ ಪಕ್ಷದ ಕುರಿತಂತೆ ಆಗು–ಹೋಗುಗಳ ಮಾಹಿತಿ ನೀಡುತ್ತಾರೆ ಎಂದು ಹೇಳಿದ್ದಾರೆ. ರಾಜಕೀಯ ಪಕ್ಷಗಳಿಗೆ ವಂತಿಕೆ ಕುರಿತಂತೆ ಕೇಳಲಾದ ಪ್ರಶ್ನೆಗೆ ಇಲ್ಲ ಎಂದು 25 ಜನ ಮಹಿಳೆಯರು ಉತ್ತರಿಸಿದ್ದಾರೆ. ಇದಲ್ಲದೇ ಅವರಿಗೆ ರಾಜಕೀಯದ ಆರ್ಥಿಕ ವಂತಿಗೆ ಕುರಿತಂತೆ ಮಾಹಿತಿ ಇಲ್ಲದಿರುವುದು ಕಂಡು ಬರುತ್ತದೆ. ಜನ ಸಮುದಾಯದ ಸಮಸ್ಯೆಗಳನ್ನು ಇಟ್ಟುಕೊಂಡು ಪಕ್ಷದ ಮೂಲಕ ಯಾವುದಾದರೂ ಹೋರಾಟಗಳಲ್ಲಿ ಭಾಗವಹಿಸಿದ ಅಥವಾ ಹೊರಾಟ ಮಾಡಿದ ನಿದರ್ಶನಗಳಿವೆಯೇ? ಎನ್ನುವ ಪ್ರಶ್ನೆಗೆ 25 ಜನ ಮಹಿಳೆಯರು ಇಲ್ಲ ಎಂದು ಉತ್ತಿರಿಸಿದ್ದಾರೆ. ಆದರೆ ಈ ಪ್ರಶ್ನೆಗೆ ಬೆರಳೆಣಿಕೆಯಷ್ಟು ಮಹಿಳೆಯರು ನಾವು ಸ್ಪರ್ಧಿಸಿದ ಪಕ್ಷ ಜನರಿಗಾಗಿ ಯಾವ ಕೆಲಸಗಳು ನಿರ್ವಹಿಸಿವೆ ಯೋಜನೆಗಳನ್ನು ಜಾರಿಗೆ ತಂದಿವೆ ಈಗಾ ನಮ್ಮ ಪಕ್ಷ ಜನರಿಗಾಗಿ ಏನೆಲ್ಲ ಕೆಲಸ ಮಾಡುತಿದೆ ಎನ್ನುವ ಕುರಿತಂತೆ ನಮಗೆ ತಿಳಿದ ಮಟ್ಟಿಗೆ ಜನರಿಗೆ (ಮತದಾರರಿಗೆ) ಹೇಳುವ ಕೆಲಸ ಮಾಡಿದ್ದೇವೆ ಎನ್ನುವ ಉತ್ತರ ದೊರೆಯುತ್ತದೆ. ಜೊತೆಗೆ ಪಕ್ಷದ ವತಿಯಿಂದ ಕರಪತ್ರಗಳನ್ನು

**ಕೋಷ್ಟಕ 2: ಚುನಾವಣೆಗೆ ಸ್ಪರ್ಧಿಸಿದ ಮಹಿಳೆಯರ ಅಭಿಪ್ರಾಯಗಳು**

| ಕ್ರ. ಸಂಖ್ಯೆ | ಪ್ರಶ್ನೆಗಳು | ಉತ್ತರ | |
|---|---|---|---|
| | | ಹೌದು | ಇಲ್ಲ |
| 1 | ನಿಮ್ಮ ಕುಟುಂಬಕ್ಕೆ ರಾಜಕೀಯ ಹಿನ್ನೆಲೆ ಇದೆಯೇ? | 23 (76.66%) | 7 (23.33%) |
| 2 | ನಿಮ್ಮ ಕುಟುಂಬದಲ್ಲಿ ಮಹಿಳೆಯರು ಚುನಾವಣೆಯಲ್ಲಿ ಸ್ಪರ್ಧಿಸಲು ಸಮ್ಮತಿ ಮತ್ತು ಬೆಂಬಲವಿದೆಯೆ? | 18 (60%) | 12 (30%) |
| 3 | ವೈಯಕ್ತಿಕವಾಗಿ ರಾಜಕೀಯಕ್ಕೆ ಪ್ರವೇಶಕ್ಕೆ ನಿಮಗೆ ಆಸಕ್ತಿ ಇದೆಯೇ? | 8 (26.66%) | 22 (73.33%) |
| 4 | ರಾಜಕೀಯ ಪಕ್ಷದ ಸದಸ್ಯತ್ವ ಹೊಂದಲಾಗಿದೆಯೇ? | 4 (13.33%) | 26 (86.66%) |
| 5 | ರಾಜಕೀಯ ಪಕ್ಷದ ಪರವಾಗಿ ಚುನಾವಣೆ ಪ್ರಚಾರದಲ್ಲಿ ಭಾಗವಹಿಸಲಾಗಿದೆಯೇ? | 10 (33.33%) | 20 (66.66%) |
| 6 | ರಾಜಕೀಯ ಪಕ್ಷಗಳ ಸಭೆಗಳಿಗೆ ಹಾಜರಾಗಲಾಗಿದೆಯೇ? | 9 (30%) | 21 (70%) |
| 7 | ರಾಜಕೀಯ ಪಕ್ಷದ ಮುಖಂಡರೊಂದಿಗೆ ಪಕ್ಷದ ಕೆಲಸ ಕಾರ್ಯಗಳ ಕುರಿತಂತೆ ನಿರಂತರ ಸಂಪರ್ಕದಲ್ಲಿ ಇದ್ದೀರಾ? | 5 (16.66%) | 25 (83.33%) |
| 8 | ರಾಜಕೀಯ ಪಕ್ಷಗಳಿಗೆ ಆರ್ಥಿಕ ವಂತಿಕೆ ನೀಡಲಾಗುತ್ತಿದೆಯೇ? | 4 (13.33%) | 26 (86.66%) |
| 9 | ಜನ/ಸಮುದಾಯದ ಒಂದು ಸಮಸ್ಯೆಯನ್ನು ಇಟ್ಟುಕೊಂಡು ಪಕ್ಷದ ಮೂಲಕ ಯಾವುದಾದರು ಮುಷ್ಕರ/ಪ್ರದರ್ಶನ/ಹೊರಾಟ ಮಾಡಿದ ನಿದರ್ಶನಗಳು ಇವೆಯೇ? | 5 (16.66%) | 25 (83.33%) |
| 10 | ರಾಜಕೀಯ ಸಭೆಯನ್ನು ತಮ್ಮ ಬೆಂಬಲಿಗರೊಂದಿಗೆ ನಡೆಸಲಾಗುತ್ತಿದೆಯೇ? | 9 (30%) | 21 (70%) |
| 11 | ರಾಜಕೀಯ ಒತ್ತಡ ಗುಂಪುಗಳಿಗೆ ಸದಸ್ಯತ್ವವನ್ನು ಹೊಂದಲಾಗಿದೆಯೇ? | 4 (13.33%) | 26 (86.66%) |
| 12 | ರಾಜಕೀಯ ಪಕ್ಷದ ಕುರಿತಾಗಿ ಕರ ಪತ್ರ ಹಂಚುವುದು/ಪಕ್ಷದ ಕುರಿತಾದ ಸಾಧನೆಗಳನ್ನು ಜನರಿಗೆ ತಲುಪಿಸುವ ಕೆಲಸ ನಿರ್ವಹಿಸಲಾಗಿದೆಯೇ | 16 (53.33%) | 14 (46.66%) |
| 13 | ರಾಜಕೀಯ ಪಕ್ಷಗಳ ಕುರಿತಾಗಿ ಭಾಷಣ ಮಾಡಲಾಗುತಿದೆಯೇ? | 9 (30%) | 21 (70%) |
| 14 | ರಾಜಕೀಯ ಪಕ್ಷದ ಕುರಿತು ವಕ್ತರರಾಗಿ ಕೆಲಸ ನಿರ್ವಹಿಸಲಾಗಿದೆಯೇ? | 2 (6.66%) | 28 (93.33%) |
| 15 | ಇತರೆ ಸಂಘಟನೆಗಳ ಜೊತೆಗೆ ಸದಸ್ಯತ್ವ ಹಾಗೂ ಬೆಂಬಲ ನೀಡುವ ಕೆಲಸ ನಿರ್ವಹಿಸಲಾಗುತ್ತದೆಯೇ? | 6 (20%) | 24 (80%) |

ಮತದಾರರಿಗೆ ಪಕ್ಷದ ಸಾಧನೆಗಳನ್ನು ವಿವರಿಸುವ ಕೆಲಸ ಮಾಡಲಾಗುತ್ತಿದೆ. ಇಲ್ಲಿ ವಿಕೇಂದ್ರೀಕರಣ ವ್ಯವಸ್ಥೆಯ ಮತ್ತು ಮೀಸಲಾತಿ ಭಾಗವಾಗಿ ದೊರೆತ ರಾಜಕೀಯ ಭಾಗವಹಿಸುವಿಕೆಯ ಅವಕಾಶಗಳಿಂದ ಮಾತ್ರ ಇಲ್ಲಿ ಮಹಿಳೆ ರಾಜಕೀಯದಲ್ಲಿ ಮಹಿಳೆ ಭಾಗಿಯಾಗುತ್ತಿದ್ದಾಳೆ. ಇದರಿಂದ ರಾಜಕೀಯ ಹೊಂದುತ್ತಿದ್ದಾಳೆ. ಆದರಾಚೆಗೆ ರಾಜಕೀಯ ಪಕ್ಷಗಳ ಕುರಿತಂತೆ ಆಳವಾದ ಜ್ಞಾನ ಮತ್ತು ಮಾಹಿತಿ

ಇಲ್ಲದಿರುವುದು ಕಂಡು ಬರುತ್ತಿದೆ. ಇದರ ಜೊತೆಗೆ ಸ್ಪರ್ಧಿಸಿದ ಮಹಿಳೆಯರಿಗೆ ರಾಜಕೀಯ ಸಾಮಾಜೀರಣದ ಕೊರತೆಯು ಕಂಡು ಬರುತ್ತಿದೆ. ಇದಕ್ಕೆ ರಾಜಕೀಯ ಒತ್ತಡ ಗುಂಪುಗಳ ಸದಸ್ಯತ್ವ ಮತ್ತು ರಜಕೀಯ ಪಕ್ಷಗಳ ಸಂಘಟನೆಯಲ್ಲಿ ಭಾಗವಹಿಸಿದಂತೆ ಮಹಿಳೆಯರ ಪ್ರಮಾಣ ತುಂಬ ಕಡಿಮೆ ಕಂಡು ಬರುತ್ತಿದೆ.

ಮತ್ತೊಂದು ಕಡೆ ರಾಜಕೀಯ ಸಭೆಯನ್ನು ತಮ್ಮ ಬೆಂಬಲಿಗರೊಂದಿಗೆ ನಡೆಸಲಾಗಿದೆಯೇ? ಎನ್ನುವ ಪ್ರಶ್ನೆಗೆ 9 ಜನ ಮಹಿಳೆಯರು ಹೌದು ಎಂದು ಉತ್ತರಿಸಿದ್ದಾರೆ. ಮುಂದುವರೆದು ಅದು ಸಂಬಂಧಿಕರು, ಸ್ನೇಹಿತರು, ಹಿತೈಸಿಗಳು, ನಮ್ಮ ಜಾತಿಯವರು ಎನಿಸಿಕೊಂಡವರ ಜೊತೆಗೆ ಚರ್ಚಿಸಲಾಗಿದೆ ಎನ್ನುತ್ತಾರೆ. ಉಳಿದಂತೆ ಮನೆಯ ಪುರುಷರು ಪಕ್ಷದ ಮುಖಂಡರ ಜೊತೆಗೆ ಸಭೆಯನ್ನು ಮಾಡಿದ್ದಾರೆ ಆಗ ನಾನು ಹೊಗಿದ್ದೇ ಆದರೇ ನಾನು ಮಾತನಾಡಲ್ಲಿಲ್ಲ ಎನ್ನುವ ಉತ್ತರಗಳು ಕಂಡು ಬರುತ್ತದೆ. ಯಾಕೆ ಎನ್ನುವು ಪ್ರಶ್ನೆಗೆ ಮನೆಯವರು ಇದ್ದಾಗ ಮತ್ತು ಅಸ್ಟೊಂದು ಪುರುಷರ ಮಧ್ಯೆ ಮತ್ತು ರಾಜಕೀಯ ಮುಖಂಡರ ಮಧ್ಯೆ ನನಗೆ/ನಮ್ಗೆ ಮಾತನಾಡಲು ಮುಜುಗರ ಎಂದು ಉತ್ತರಿಸಿದವರು ಕಮಡು ಬರುತ್ತಾರೆ. ಈ ಸಂದರ್ಭದಲ್ಲಿ ತುರುವಿಹಾಳ ಪಟ್ಟಣ ಪಂಚಾಯಿತಗೆ ಕಾಂಗ್ರೇಸ ಪಕ್ಷದಿಂದ ಸ್ಪರ್ಧಿಸಿದ ಮಹಿಳೆಯೋಬ್ಬರು ಹೇಳಿರುವ ಉತ್ತರದಲ್ಲಿ ನಮ್ಮ ಮನೆಯವರು ಮೊದಲಿನಿಂದಲು ಸಕ್ರೀಯ ರಾಜಕೀಯದಲ್ಲಿದ್ದಾರೆ. ಈ ಸಾರಿ ನಮ್ಮ ಗ್ರಾಮದವರೇ ಎಂ.ಎಲ್.ಎ ಆಗಿದ್ದಾರೆ ಮೊದಲಿನಿಂದಲು ಪಕ್ಷದ ಕೆಲಸ ನಮ್ಮ ಮನೆಯವರು ಮಾಡಿರುವುದ ಮತ್ತು ಈ ಸಾರಿ ನಮ್ಮ ವಾರ್ಡಗೆ ಮಹಿಳಾ ಮೀಸಲಾತಿ ಇರುವುದರಿಂದ ನಿಮ್ಮ ಕುಟುಂಬದಲ್ಲಿ ಒಬ್ಬ ಮಹಿಳೆಯನ್ನು ನಿಲ್ಲಿಸು ಎಂದಿರುವುದರಿಂದ ನಾನು ಸ್ಫರ್ಧೆಗೆ ಇಳಿದಿದ್ದೇನೆ ಎಂದು ಉತ್ತರ ದೊರೆಯಿತು. ಈ ಮಹಿಳೆಯಲ್ಲಿ ಸಂದರ್ಶನ ಮಾಡಿದ್ದಾಗ ರಾಜಕೀಯ ಸಹಭಾಗಿತ್ವಕ್ಕೆ ಸಂಬಂಧಿಸಿದಂತೆ ಕೇಳಲಾಗುವ ಅಥವಾ ರಾಜಕೀಯ ಸಹಭಾಗಿತ್ವ ಎಂದು ಅರ್ಥೈಯಿಸಲಾಗುವ ಯಾವುದೇ ಅಂಶಗಳಿಗೆ ಸಮಾನ ಎನ್ನುವ ಉತ್ತರಗಳು ದೊರೆಯಲ್ಲಿಲ್ಲ.

ಕೇತ್ರಕಾರ್ಯದ ಮತ್ತು ಸಂದರ್ಶನದ ಸಂದಭದಲ್ಲಿ ಅವಲೋಕಿಸಿದಂತೆ ವಿವರಿಸುವುದಾದರೆ. ಪಿತೃಪ್ರದಾನ ಸಂಸ್ಕೃತಿ ಮೌಲ್ಯಗಳು ಜೀವಂತಾಗಿ ಮಹಿಳೆಯ ಚಲನಶೀಲತೆಯನ್ನು ಕಟ್ಟಿಹಾಕಿರುವುದು ಕಂಡುಬರುತ್ತದೆ. ಬಹುತೇಕ ಮಹಿಳೆಯರು ರಾಜಕೀಯ ಪಕ್ಷ ಅಂತ ಹೇಳಿದ ತಕ್ಷಣವೆ ನಹುತೇಕ ಮಹಿಳೆಯರಿಂದ ಬರುವ ಉತ್ತರಗಳು  ಗಂಡ, ಮಾವ, ಅಣ್ಣ, ತಮ್ಮ, ಚಿಕ್ಕಪ್ಪ, ದೊಡ್ಡಪ್ಪ ಎಂದು ಪುರುಷ ಸಮುದಾಯವನ್ನೇ ಸೂಚಿಸುವುದು ಕಂಡು ಬರುತ್ತದೆ. ಮತ್ತೊಂದು ಕಡೆ ಪಕ್ಷದ ಕಾರ್ಯಕರ್ತರು ಹೆಚ್ಚಾಗಿ ಪುರುಷರೇ ಆಗಿರುವುದುರಿಂದ ಅವರ ಮುಂದೆ ಬಿಂತು ಮಾತನಾಡುವುದು ಮುಜುಗರ ಎನ್ನುವ ಉತ್ತರಗಳು, ಆದರೇ ಮನೆ ಮನೆಗೆ ಹೊಗಿ ಪಕ್ಷದ ಮತ್ತು ಚಿನ್ಹೆ ಹಾಗೂ ಕಾರ್ಯ ಸಾದನೆಗಳ ಕುರಿತಂತೆ ಕರ ಪತ್ರ ಹಂಜಿ ಮಾಹಿತಿಯನ್ನು ಮತದಾರರಿಗೆ ನೀಡಿದ್ದೇವೆ. ಇದಲ್ಲದೇ ಇಂದಿನ ಅಧುನಿಕ ಯುಗದಲ್ಲಿ ತಂತ್ರಜ್ಞಾನವನ್ನು ಬಳಸಿಕೊಂಡು ಪ್ರಚಾರ ಮಾಡಿರುವುದು ಕಂಡುಬರುತ್ತದೆ ಅದೇನೇಂದರೇ ಪ್ಲೇಕ್ಸ್, ವಾಟ್ಸ್ ಆಪ್ ಗುಂಪುಗಳು, ಟೆಲಿಗ್ರಾಮ್‌ಗಳ ಮುಖಾಂತರ ಪ್ರಚಾರ ಮಾಡಿರುವುದು ಕಂಡು ಬರುತ್ತದೆ.

ಗ್ರಾಮದ ಯೋಜನೆಗಳನ್ನು ರೂಪಿಸುವ ಅನುಷ್ಠಾನಗೊಳಿಸುವ ಸಾಧ್ಯತೆಗಳನ್ನು ಈ ವ್ಯವಸ್ಥೆ ಒಳಗೊಂಡಿರುತ್ತದೆ. ಇಂತಹ ಸಂದರ್ಭದಲ್ಲಿ ಚುನಾಯಿತ ಮಹಿಳಾ ಸದಸ್ಯೆಯರ ಸಹಭಾಗಿತ್ವದಲ್ಲಿ ಗ್ರಾಮದ ಕೆಲಸ ಕಾರ್ಯಗಳ ಬಗ್ಗೆ, ಯೋಜನೆಗಳ ಬಗ್ಗೆ, ಚರಂಡಿ ನಿರ್ಮಿಸುವುದು ಭಾಗ್ಯಜ್ಯೋತಿ

ಯೋಜನೆ, ಜವಾಹರ್ ರೋಜಗಾರ್ ಯೋಜನೆಯಲ್ಲಿ ಮನೆ ನಿರ್ಮಾಣ, ಇಂತಹ ಸಂಗತಿಗಳು ಸ್ಥಳೀಯ ರಾಜಕೀಯದಲ್ಲಿ ಮಹಿಳಾ ಸಹಭಾಗಿತ್ವ ಅಥವಾ ಮಹಿಳಾ ಸದಸ್ಯೆಯರು ರಾಜಕೀಯಗೆ ತೊಡಗುವಿಕೆಗೆ ಮೊದಲ ಮೆಟ್ಟಿಲಾಗುತ್ತದೆ. ಆದರೆ ಇದು ಈ ವರೆಗೆ ಸಾಧ್ಯವಾಗಿಲ್ಲ ಕಾರಣ ಪುರುಷಶಾಹಿ ಮತ್ತು ಅಧಿಕಾರಶಾಹಿ ವ್ಯವಸ್ಥೆಯೇ ಮೇಲುಗೈ ಸಾಧಿಸಿರುವುದಾಗಿದೆ.

ಚುನಾಯಿತ ಮಹಿಳೆಯರು ತಮ್ಮ ಆಡಳಿತಾತ್ಮಕ ಮತ್ತು ಅಭಿವೃದ್ಧಿಪರ ಚಟುವಟಿಕೆಗಳಲ್ಲಿ ಪುರುಷರ ಸಹಕಾರವನ್ನು ಬಯಸುತ್ತಿರುವುದು ಕಂಡು ಬರುತ್ತದೆ. ಇದಕ್ಕೆ ಗ್ರಾಮ ಪಂಚಾಯತ್ ಸಭೆಗಳಲ್ಲಿ ಭಾಗವಹಿಸುವ ಸಂಗತಿಗಳಲ್ಲಿ ಪತಿ, ಮಗ, ಮಾವ, ಮೈದುನ, ಅಣ್ಣ ತಮ್ಮ ಅಥವಾ ಪುರುಷ ಸದಸ್ಯರ ಮೇಲೆ ಅವಲಂಬಿತವಾಗಿರುವುದು ಕಂಡು ಬರುತ್ತದೆ. ಇದು ಕೂಡ ರಾಜಕೀಯಲ್ಲಿ ಮಹಿಳಾ ಸಹಭಾಗಿತ್ವಕ್ಕೆ ಹಿನ್ನಡೆಯಾಗುತಿರುವುದು ಕಂಡು ಬರುತ್ತದೆ.

ಗ್ರಾಮ ಪಂಚಾಯತಿಗಳ ಪ್ರತಿನಿಧಿಗಳ ರಾಜಕೀಯ ಭಾಗವಹಿಸುವಿಕೆ ಮತ್ತು ನಿರ್ಣಯ ಪ್ರಕ್ರಿಯೆಗಳನ್ನು ಕುರಿತಂತೆ ನಡೆದ ಅಧ್ಯಯನಗಳನ್ನು ಗಮನಿಸಿದಾಗ ಕೆಲವೊಂದು ಮಹತ್ವದ ಸಂಗತಿಗಳು ಅರಿವಿಗೆ ಬರುತ್ತವೆ. ಚುನಾಯಿತ ಪ್ರತಿನಿಧಿಗಳು ಗ್ರಾಮ ಪಂಚಾಯತಿಯ ಸಭೆಗಳಲ್ಲಿ ಹೆಚ್ಚು ಆಸಕ್ತಿವಹಿಸಿ ಮಾತನಾಡುವ ವಿಷಯಗಳೆಂದರೆ ಕುಡಿಯುವ ನಿರು, ಶೌಚಾಲಯ, ಆರೋಗ್ಯಕ್ಕೆ ಸಂಬಂಧಪಟ್ಟಂತಹ ಸಂಗತಿಗಳೇ ಪ್ರಧಾನವಾಗಿರುತ್ತವೆ.

ಚುನಾಯಿತ ಮಹಿಳಾ ಸದಸ್ಯೆಯರ ರಾಜಕೀಯ ಭಾಗವಹಿಸುವಿಕೆಯ ಮೇಲೆ ಪ್ರಭಾವಬೀರುವ ರಾಜಕೀಯ ಸಾಮಾಜೀಕರಣದ ವಿವಿಧ ನಿಯೋಗಗಳ ಹಿನ್ನಲೆಯಲ್ಲಿ ಮಹಿಳಾ ಸದಸ್ಯೆಯರ ಖಾಸಗಿ ಬದುಕನ್ನು ಅವರ ಅಂತರಂಗದ ವಿವಿಧ ತರಂಗಗಳನ್ನು ಇಲ್ಲಿ ಅಧ್ಯಯನಿಸಲು ಪ್ರಯತ್ನಿಸಲಾಗಿದೆ. ಇದರಿಂದ ಚುನಾಯಿತ ಮಹಿಳಾ ಸದಸ್ಯೆಯರನ್ನು ಬಹುಮುಖಿ ಸಂವೇಧನೆಗಳ ಹಿನ್ನೆಲೆಯಲ್ಲಿ ವಿಶ್ಲೇಶಿಸಿಕೊಳ್ಳಲು ಅನುಕೂಲವಾಗಿದೆ. ಪ್ರತಿಯೊಬ್ಬ ಮಹಿಳಾ ಸದಸ್ಯೆಯ ಅಂತರಂಗದೊಂದಿಗಿನ ಆಪ್ತ ಸಮಾಲೋಚನೆಯು ಈ ಮಾದರಿಯ ಅಧ್ಯಯನಕ್ಕೆ ಹಲವಾರು ವಿಸ್ತಾರಗಳನ್ನು, ಸೂಕ್ಷ್ಮ ಒಳನೋಟಗಳನ್ನು ಮತ್ತು ನಿಖರತೆಯನ್ನು ತಂದುಕೊಟ್ಟಿದೆ.

ವಿಕೇಂದ್ರೀಕರಣದ ಪರಿಣಾಮಕಾರಿ ಆಚರಣೆಗೆ ಮಹಿಳಾ ಸಶಕ್ತೀಕರಣವು ತುಂಬಾ ಮಹತ್ವದ್ದು. ಸಶಕ್ತೀಕರಣದ ಬಹುಮುಖ್ಯ ಗುಣವೆಂದರೆ ಸ್ವಾತಂತ್ರ್ಯ. ಮನವಾರ್ತೆಯ ಜವಾಬ್ದಾರಿಗಳೇ ಮೀಸಲಾಗಿರುವ ಮಹಿಳೆಗೆ ಸಾರ್ವಜನಿಕ ಬದುಕೆ ಇಲ್ಲವೆನ್ನುವಂತಹ ವಾತಾವರಣವಿದೆ. ಮಹಿಳಾ ಸದಸ್ಯೆಯರ ಜಗತ್ತು ಕೇವಲ ಖಾಸಗಿಯಾದದ್ದು ಮತ್ತು ಕುಟುಂಬ ಸಂಬಂಧಿಯಾದುದು ಎಂಬ ಲಿಂಗತಾರತಮ್ಯವಾದಿ ಧೋರಣೆಯು ಸಮಾಜದಲ್ಲಿ ಬೇರೂರಿದೆ. ಆದರೆ ಭಾರತದ ಸಂವಿಧಾನದ ಪ್ರಸ್ತಾವನೆಯಲ್ಲಿ ಸಮಾನ ಅವಕಾಶ ಮತ್ತು ಸಹಬಾಳ್ವೆಯ ಅಂಶಗಳನ್ನು ಸೇರಿಸಲಾಗಿದೆ. ಮೂಲಭೂತ ಹಕ್ಕುಗಳು ಎಲ್ಲಾ ಭಾರತೀಯ ನಾಗರಿಕರಿಗೆ ದಕ್ಕಬೇಕೆಂಬುದು ಸಂವಿಧಾನದ ಆಶಯದಲ್ಲಿ ಕಂಡು ಬರುತ್ತದೆ. ಆದರೆ ಪರಂಪರಿಕವಾಗಿ ಮಹಿಳೆಯನ್ನು ಪುರುಷನಿಗೆ ಅಡಿಆಳಾಗಿ, ಸಹಾಯಕಳಾಗಿ, ಭೋಗದ ವಸ್ತುವಾಗಿ ನೋಡಿಕೊಂಡಿದ್ದರಿಂದ ಸಂವಿಧಾನದಲ್ಲಿ ಸಮಾನತೆ, ಸ್ವತಂತ್ರದ ಆಶಯಗಳು ವಾಸ್ತವದಲ್ಲಿ ಜಾರಿಗೊಳ್ಳುವಲ್ಲಿ ತೊಡಕಾಗಿವೆ. ಆದರೂ ಮಹಿಳಾ ಪ್ರಧಾನವಾದ ಕೆಲವು ಅನುಚ್ಛೇದಗಳ ಸೇರ್ಪಡೆಯಿಂದ ಮಹಿಳಾ ಪ್ರತಿನಿಧ್ಯವನ್ನು ಎತ್ತಿ ಯಿಡಿಯುವಲ್ಲಿ ನೆರವಾಗಿರುವುದು ಕಂಡು ಬರುತ್ತದೆ. ಮಹಿಳೆಯನ್ನು ಸರಕಿನಂತೆ ಬಳಸುವ ಕ್ರಮಗಳು ಪ್ರಗತಿಯ ಮಾನದಂಡಗಳಾಗಿರುವುದು. ಗಂಡ ಸತ್ತ ಮೇಲೆ ಅವನ ಹೆಸರಲ್ಲಿ ಹೆಂಡತಿಗೆ ಇಷ್ಟವಿರಲ್ಲಿ ಇಲ್ಲದಿರಲ್ಲಿ ಅನುಕಂಪದ ಅಲೆಯಲ್ಲಿ ಗೆಲ್ಲಿಸುವುದು,

ಗೆದ್ದ ನಂತರ ಯಾವುದೇ ಸ್ಥಾನಮಾನ ನೀಡದೆ ಪಕ್ಷದ ಕೆಲಸ ಕಾರ್ಯಗಳಲ್ಲಿ ದುಡಿಸಿಕೊಳ್ಳುವುದು, ಇಲ್ಲವೇ ಪಕ್ಷದ ಬೆಳವಣಿಗೆಗೆ ಬಳಸಿಕೊಳ್ಳುವುದು, ಮೀಸಲಾತಿ ಅನಿವಾರ್ಯತೆ, ಪುರುಷ ಪ್ರಧಾನ ಸ್ವಾರ್ಥಕ್ಕೆ ಹೀಗೆ ರಾಜಕೀಯದಲ್ಲಿ ಮಹಿಳೆಯರನ್ನು ಸಹಭಾಗಿಗಳನ್ನಾಗಿಸಿಕೊಂಡಿರುವುದು ಇದೆ. ಇದೆಲ್ಲ ಮಹಿಳೆಯ ರಾಜಕೀಯ ಹಾಜರಾತಿಗೆ ಮಾತ್ರ ಸಿಮಿತಗೊಳಿಸಿದಂತೆ ಕಂಡು ಬರುತ್ತದೆ.

**ಪರಾಮರ್ಶನ ಗ್ರಂಥಗಳು**


- ಅನುಪಮ ಎಚ್. ಎಸ್. (2012). ಮಹಿಳೆಯ ದಲಿತತ್ವ ಮತ್ತು ರಾಜಕೀಯ ಪ್ರಜ್ಞೆ, ಲಡಾಯಿ ಪ್ರಕಾಶನ.
- ಹೇಮಲತಾ ಎಚ್.ಎಂ. (2013). ಮಹಿಳಾ ಸಶಕೀಕರಣ: ಒಂದು ಪರಿಕಲ್ಪನೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.
- ನರಸಿಂಹ ಮೂರ್ತಿ ಎಸ್. ಎಂ. (2020). ಪಂಚಾಯತ್ ರಾಜ್ ಮತ್ತು ಮಹಿಳಾ ಸಶಕ್ತೀಕರಣ. ಅಂಕನಹಳ್ಳಿ ಪ್ರಕಾಶನ.
- ಯೋಗರಾಜ್ ಎಸ್.ಡಿ. (2013). ಮಹಿಳಾ ಸಬಲೀಕರಣ. ಶ್ರೀ ಅನ್ನಪೂರ್ಣ ಪಬ್ಲಿಷರ್ಸ್ ಅಂಡ್ ಡಿಸ್ಟ್ರಬ್ಯೂಟರ್ಸ್, ಬೆಂಗಳೂರು.
- ರಾಜ್ಯ ಚುನಾವನಾ ಆಯೋಗದ ಅಂತರ್ಜಾಲ.
- ರಾಯಚೂರು ಜಿಲ್ಲಾ ಪಂಚಾಯಿತಿ ಅಂತರ್ಜಾಲ.